# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 173
ಸದಸ್ಯರ ಹೆಸರು : ಶ್ರೀ ಬಿ.ಎಂ.ಫಾರೂಖ್
ಉತ್ತರಿಸುವ ದಿನಾಂಕ : 05.07.2023.
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | LAND LOCK ಆದ ಸರ್ಕಾರಿ ಜಮೀನು ಖರೀದಿ ನಿಯಮಗಳನ್ನು ರಾಜ್ಯ ವ್ಯಾಪ್ತಿಯಾಗಿ ವಿಸ್ತರಿಸುವ ಕುರಿತಾಗಿ ಸರ್ಕಾರದ ನಿಲುವುಗಳೇನು? (ವಿವರ ನೀಡುವುದು) | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 69-ಎ ಮತ್ತು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22(ಎ)(2)ರ ಪರಂತುಕದನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗಳಿಂದ 18.ಕಿ.ಮೀ ಒಳಗಿನ ಹಾಗೂ ಇತರ ನಗರ ಪಾಲಿಕೆಗಳ ವ್ಯಾಪ್ತಿಗಳಿಂದ 5 ಕಿ.ಮೀ.ಗಳ ವರೆಗಿನ ಭೂ ಬಂಧಿತ ಸರ್ಕಾರಿ ಖರಾಬು ಭೂಮಿಯನ್ನು ಕಲಂ 68ರಡಿಯಲ್ಲಿ ಸಾರ್ವಜನಿಕ ಹಕ್ಕನ್ನು ವಿಹಿತಗೊಳಿಸಿದ ನಂತರ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗಳಿಂದ 18.ಕಿ.ಮೀ ಒಳಗಿನ ಹಾಗೂ ಇತರ ನಗರ ಪಾಲಿಕೆಗಳ ವ್ಯಾಪ್ತಿಗಳಿಂದ 5 ಕಿ.ಮೀ.ಗಳ ವರೆಗಿನ ಭೂ ಬಂಧಿತ ಸರ್ಕಾರಿ ಖರಾಬು ಭೂಮಿಯನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದ್ದು, ರಾಜ್ಯ ವ್ಯಾಪ್ತಿ ವಿಸ್ತರಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |
| ಆ) | ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ LAND LOCK ಆದ ಸರ್ಕಾರಿ ಜಮೀನು ಆಸ್ತಿಗಳಿದ್ದು, ಖರೀದಿ ಮಾರಾಟ ನಿಯಮಗಳು, ಅಧಿಸೂಚನೆ ಹೊರಡಿಸಿದ್ದಲ್ಲಿ ಅನೇಕ ರೈತರಿಗೆ, ಕೃಷಿಕರಿಗೆ ಅನುಕೂಲವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ) | ಹಾಗಿದ್ದಲ್ಲಿ, ವ್ಯರ್ಥವಾಗಿ ಬೀಳುವ ಭೂಮಿಯನ್ನು ಅಭಿವೃದ್ಧಿ ಪಡಿಸಿದಂತಾಗುವುದು, ಹಾಗೂ ಸರ್ಕಾರಕ್ಕೆ ಆದಾಯ ಮೂಲವೂ ಆಗುವುದನ್ನು ಸರ್ಕಾರ ಗಮನಿಸಿ ಶೀಘ್ರ ಕಾರ್ಯ ಯೋಜನೆ ಹೊರಡಿಸುವುದೇ; (ವಿಸ್ತೃತ ವಿವರ ನೀಡುವುದು) | |
| ಈ) | ಒಂದು ಪರಿಷ್ಕೃತ, ಸ್ಪಷ್ಟ LAND LOCK ನಿಯಮಗಳನ್ನು ಸರ್ಕಾರ ರೂಪಿಸುವುದೇ? | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 69-ಎ ರಡಿ ಹಾಗೂ ಕರ್ನಾಟಕ ಭೂ ಮಂಜೂರಾತಿಗಳು, 1969ರ ನಿಯಮ 22-ಎ ರಡಿ ಭೂ ಬಂಧಿತ ಸರ್ಕಾರಿ ಖರಾಬು ಜಮೀನನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಪರಿಷ್ಕೃತ ನಿಯಮಗಳನ್ನು ರೂಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಆರ್‌ಡಿ 58 ಎಲ್‌ಜಿಕ್ಯೂ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು